ತಾರೀಖು ೬ನೆ ಮೇ 1907.

ನಂಬರು A.

ಇಸ್ತಿಹಾರ್ನ ಮೆ.

1907ನೆ ಇಸವಿಯ ಜುಲೈ ಗುರ್ರೆ ಲಾಗಾಯಿತು ಮೂರು ವರ್ಷ ಕಾಲ ಪರ್ಯಂತ ಗಾಂಜಾ ಗಿಡವನ್ನು ಬೆಳೆದು ಗಾಂಜಾವನ್ನು ತಯಾರ್ಮಾಡಿ ಮೈಸೂರು ಸರ್ಕಾರಕ್ಕೆ ಸರಬರಾಯಿ ಮಾಡುವ ಸ್ವಾತಂತ್ರ್ಯವನ್ನು ಪಡೆಯುವುದಕ್ಕೆ ದರಖಾಸ್ತುಗಳನ್ನು ಈ ಮೂಲಕ ಕೋರಿದೆ.

2. ಈ ಸ್ವಾತಂತ್ರ್ಯವನ್ನು ಮುಂದೆ ವಿಧಿಸಿರುವ ಪರತ್ತುಗಳಿಗೂ, ಈಗ ಜಾರಿಯಲ್ಲಿರುವ ಮತ್ತು ಮುಂದ ಆಗಾಗ್ಯೆ ಏರ್ಪಡಿಸಲ್ಪಡಬಹುದಾದ ಆಬ್ಕಾರಿ ಕಾನೂನುಗಳಿಗೂ, ನಿಬಂಧನೆಗಳಿಗೂ ಬಳಿಪಟ್ಟು ಕೊಡಲಾಗುವುದು.

3. ಈಗ ಬೇಕಾಗಿರುವ ಗಾಂಜಾವಿನ ಕುಲ್ ಅದದ್ ವರ್ಷ ಬಂದಕ್ಕೆ ಸುಮಾರು 1,000, 1,200 ಮೈಸೂರು ಮಣಗಳೊಳಗೆಂದು (ಅಥವಾ ಸೇರಿಗೆ 80 ತೊಲಾ ತೂಕವುಳ್ಳ 12,000, 14,400 ಸೇರುಗಳೊಳಗೆಂದು) ಅಂದಾಜಾಗಿದೆ. ಪ್ರತಿ ದರಖಾಸ್ತು 200 ಮಣಗಳಿಗಿಂತ (2,400 ಸೇರುಗಳಿಗಿಂತ) ಹೆಚ್ಚಿಗಾಗಲಿ 100 ಮಣಗಳಿಗಿಂತ (1,200 ಸೇರುಗಳಿಗಿಂತ) ಕಡಮೆಗಾಗಲಿ ಆಗಿರಕೂಡದು; ಮತ್ತು 100 ಮಣಗಳಿಗಿಂತ ಎಂದರೆ ಸೇರಿಗೆ 80 ತೊಲಾ ತೂಕವುಳ್ಳ 1,200 ಸೇರುಗಳಿಗಿಂತ ಕಡಮೆಯಾಗಿ ಗಾಂಜಾ ಸರಬರಾಯಿ ಮಾಡುವುದಾಗಿ ಹೇಳುವ ಯಾವ ದರಖಾಸ್ತು ಪರ್ಯಾಲೋಚಿಸಲ್ಪಡುವುದಿಲ್ಲ; ಮತ್ತು ಬಂದ ಒಟ್ಟು ದರಖಾಸ್ತುಗಳ ಪೈಕಿ ಈಗ ಬೇಕಾಗಿರುವ ಪೂರಾ ವೊತ್ತಕ್ಕೆ ಸರಿಯಾಗಿ ಎಷ್ಟು ಬೇಕೋ ಅಷ್ಟು ಮಾತ್ರವೇ ಅಂಗೀಕರಿಸಲ್ಪಡುವುದು.

4. ಸರಬರಾಯಿ ಮಾಡಲ್ಪಟ್ಟ ಗಾಂಜಾವು ಕೂಡಿದಷ್ಟು ಮಟ್ಟಿಗೆ ಕಡ್ಡಿಯೂ, ಬೀಜವೂ ಇಲ್ಲದೆ ಕರಗುಪಡಿಗೆ ಕೊಡತಕ್ಕ ಸ್ಥಿತಿಯಲ್ಲಿರಬೇಕು. ಎಕ್ಸೈಜ್ ಕಮಿಷನರಿಂದಾಗಲಿ ಅಥವಾ ಗಾಂಜಾವನ್ನು ತೆಗೆದುಕೊಳ್ಳಲು ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಾಗಲಿ ಕರಗುಪಡಿಗೆ ತಕ್ಕದ್ದೆಂದು ಅಂಗೀಕರಿಸಲ್ಪಡದೆ ಇರುವ ಗಾಂಜಾವನ್ನೆಲ್ಲಾ ನಾಶಪಡಿಸಲಾಗುವುದು. ತಯಾರಾದ ಗಾಂಜಾ ಪೈಕಿ ಎಕ್ಸೈಜ್ ಕಮಿಷನರಿಂದಾಗಲಿ ಮೇಲ್ಕಂಡಂತೆ ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಾಗಲಿ ಅಂಗೀಕರಿಸಲ್ಪಡುವಷ್ಟನ್ನು ಸರ್ಕಾರಕ್ಕೆ ತೆಗೆದುಕೊಂಡು, ಎಕ್ಸೈಜ್ ಕಮಿಷನರು ತರಹೇವಾರಿ ವಿಂಗಡನೆಯಿಂದ ಗೊತ್ತು ಮಾಡುವ ರೀತಿಯಲ್ಲಿ 12 ಸೇರುಗಳ (960 ತೊಲಾಗಳ) ಮಣ ಬಂದಕ್ಕೆ ಆಬ್ಕೈರು ದರ್ಜಾ 9 ರೂಪಾಯಿ ಲಾಗಾಯಿತು ಅವಲ್ ದರ್ಜಾ 12 ರೂಪಾಯಿ ವರೆಗೆ ಮುನಾಸಬಬ್ ಖರೀದಿ ದೊರಕುವುದು. ಅಂಗೀಕಾರಕ್ಕೆ ಲಾಯಖ್ ಅಲ್ಲದ ಸ್ವಲ್ಪ ಮಾತ್ರ ನಿಕೃಷ್ಟವಾದ ಗಾಂಜಾವಿಗೆ ಉಪಯೋಗಕ್ಕೆ ಲಾಯಖಾಗಿ ಇದ್ದಲ್ಲಿ ಆಬ್ಕೈರು ದರ್ಜಾ ಕಿಮ್ಮತ್ತಿಗಿಂತ ಕಮ್ಮಿಯಾಗಿ ಮುನಾಸಬಬ್ ಅರಿತು ಖರೀದಿ ಕೊಡಲ್ಪಡುವುದು. ಕಂಟ್ರಾಕ್ಟರು ಅಂಥಾ ಖರೀದಿಗೆ ಒಪ್ಪದೆ ಹೋದರೆ ತಿರಸ್ಕರಿಸಲ್ಪಟ್ಟ ಗಾಂಜಾವಿನಂತೆ ನಿಲೆ ಮಾಡಲ್ಪಡುವದು.

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಬೆಂಗಳೂರು ಮತ್ತು ನೆಲಮಂಗಲ ತಾಲ್ಲೂಕುಗಳು.
ತುಮಕೂರು ಡಿಸ್ಟ್ರಿಕ್ಟಿನಲ್ಲಿ ಕುಣಿಗಲು ಮತ್ತು ತುಮಕೂರು ತಾಲ್ಲೂಕುಗಳು.
ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮೈಸೂರು ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳು.
ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಹೊಳಲ್ಕೆರೆ ಮತ್ತು ದಾವಣಗೆರೆ ತಾಲ್ಲೂಕುಗಳು.

ಗಾಂಜಾ ಸಾಗುವಳಿಯನ್ನು ಈ ರೇಬಿಯಲ್ಲಿ ಕಾಣಿಸಿರುವ ತಾಲ್ಲೂಕುಗಳಲ್ಲಿ ಮಾತ್ರವೇ ನಡೆಸಬೇಕೆಂದು ವಿಧಿಸಿರುವುದರಿಂದ ದರಖಾಸ್ತುದಾರರು ಇವುಗಳ ಪೈಕಿ ಎಲ್ಲಿ ಗಾಂಜಾ ಸಾಗುವಳಿಯನ್ನು ನಡೆಸುವುದಾಗಿ ಹೇಳುತ್ತಾರೋ ಆ ತಾಲ್ಲೂಕುಗಳ ವಿವರವನ್ನು ಕಾಣಿಸಬೇಕು. ಅಂಗೀಕೃತರಾದ ದರಖಾಸ್ತುದಾರರು ಸಾಗುವಳಿ ನಡೆಸುವುದಾಗಿ ಉದ್ದೇಶಿಸಿರುವ ಸ್ಥಳಗಳನ್ನು ಎಂದರೆ ಗ್ರಾಮಗಳನ್ನೂ ಜಮ್ಮಿಗೆಳ ಸರ್ವೆ ನಂಬರುಗಳನ್ನೂ ವಿವರಿಸಿ ಕೊಟ್ಟು ಅರ್ಜಿಯು ಮೇಲೆ ಕೊಡಲ್ಪಡುವ ನಿಬಂಧನೆಗಳ ಪ್ರಕಾರ ಸಾಗುವಳಿ ಬಗ್ಗೆ ಕ್ರಮವಾಗಿ ಲೈಸೆನ್ಸು ಪಡೆದ ತರುವಾಯ ಮಾತ್ರವೇ ಸಾಗುವಳಿಗೆ ಆರಂಭ ಮಾಡಬೇಕು. ಸಾಧ್ಯವಾದ ಮಟ್ಟಿಗೂ ಒಂದೇ ಪ್ರದೇಶವನ್ನು ಅಥವಾ ಒಂದಕ್ಕೊಂದಕ್ಕೆ ಹತ್ತಿರದಲ್ಲಿರುವ ತಾಕುಗಳನ್ನು ಜುನಾಯಿಸಬೇಕು. ಜುನಾಯಿಸಿದೆ ಒಟ್ಟು ವಿಸ್ತೀರ್ಣವು ಕಡೇಪಕ್ಷ 100 ಮಣಗಳ ಉತ್ಪತ್ತಿಗೆ ಸಾಕಾಗಿರಬೇಕು.

5. ಪ್ರತಿ ದರಖಾಸ್ತಿಗೂ ಜತೆಯಲ್ಲಿ ನಗದಾಗಿ ಅಥವಾ ಕರೆನ್ಸಿ ನೋಟುಗಳ ರೂಪದಲ್ಲಿ 50 ರೂಪಾಯಿ ಠೇವಣಿಯನ್ನು ಬಂದು ಮೊಹರು ಮಾಡಿದ ಲಿಫಾಫೆಯಲ್ಲಿ ಹಾಕಿ "ಗಾಂಜಾ ಗಿಡವನ್ನು ಸಾಗುವಳಿ ಮಾಡುವ ಮತ್ತು ಗಾಂಜಾ ತಯಾರ್ಮಾಡಿ ಸರಬರಾಯಿ ಮಾಡುವ ಸ್ವಾತಂತ್ರ್ಯಕ್ಕೆ ದರಖಾಸ್ತು" ಎಂದು ವಿಳಾಸ ಬರೆದು ಬೆಂಗಳೂರಿಗೆ ಎಕ್ಸೈಜ್ ಕಮಿಷನರಿಗೆ 1907ನೆ ಇಸವಿಯ ಜೂನ್ 12ನೆ ತಾರೀಖು ಬುಧವಾರ ಮಧ್ಯಾಹ್ನಕ್ಕೆ ಮುಂಚಿತವಾಗಿ ತಲಪುವಂತೆ ಕಳುಹಿಸಬೇಕು. ಆ ತಾರೀಖಿನ ತರುವಾಯ ಯಾವ ದರಖಾಸ್ತೂ ಅಂಗೀಕರಿಸಲ್ಪಡುವುದಿಲ್ಲ. ದರಖಾಸ್ತುಗಳನ್ನು ಎಕ್ಸೈಜ್ ಕಮಿಷನರು ಬೆಂಗಳೂರಿನಲ್ಲಿರುವ ತಮ್ಮ ಕಛೇರಿಯಲ್ಲಿ ಆ ದಿವಸ ಮಧ್ಯಾಹ್ನ 12 ಘಂಟೆಗೆ ಅಲ್ಲಿ ಹಾಜರಿರಬಹುದಾದ ದರಖಾಸ್ತುದಾರರ ಎದುರಿಗೆ ಒಡೆಯುವರು. ದರಖಾಸ್ತುಗಳನ್ನು ಆಬ್ಕೈರಾಗಿ ಏಲ್ ಮಾಡುವ ಅಧಿಕಾರವು ಎಕ್ಸೈಜ್ ಕಮಿಷನರಿಗೇ ಇರುವುದರಿಂದ ಅವರು ದರಖಾಸ್ತುಗಳ ಪೈಕಿ ಯಾವುದನ್ನಾಗಲಿ ಎಲ್ಲವನ್ನಾಗಲಿ ಕಾರಣ ಹೇಳದೇನೇ ತಿರಸ್ಕರಿಸುವ ಪೂರ್ಣಾಧಿಕಾರವನ್ನು ತಮಗೆ ಉಳಿಸಿಕೊಂಡಿರುತ್ತಾರೆ. ಯಾವ ದರಖಾಸ್ತುಗಳು ತಿರಸ್ಕರಿಸಲ್ಪಡುತ್ತವೆಯೋ ಅವರ ಠೇವಣಿ ಹಣಗಳು ಅವರ ಅರ್ಜಿಯ ಮೇಲೆ ಅವರಿಗೆ ವಾಪಸು ಮಾಡಲ್ಪಡುವುವು.

6. ಯಾರ ದರಖಾಸ್ತುಗಳು ಎಕ್ಸೈಜ್ ಕಮಿಷನರಿಂದ ಆಬ್ಕೈರಾಗಿ ಅಂಗೀಕರಿಸಲ್ಪಡುತ್ತವೆಯೋ ಆ ಮನುಷ್ಯ ಅಥವಾ ಮನುಷ್ಯರು ಅವರ ದರಖಾಸ್ತು ಅಂಗೀಕರಿಸಲ್ಪಟ್ಟ ಸಂಗತಿ ಅವರಿಗೆ ತಿಳಿಸಲ್ಪಟ್ಟ 8 ದಿವಸಗಳೊಳಗಾಗಿ 200 ಮೈಸೂರು ಮಣಗಳ ಗಾಂಜಾ ಸರಬರಾಯಿ ಬಗ್ಗೆ ಹಿಂದೆ ಮಾಡಿದ್ದ ಠೇವಣಿಯೂ ಸೇರಿ ಒಟ್ಟು (ಐದುನೂರು) 500 ರೂಪಾಯಿಗಳಾಗುವಷ್ಟು ನಗದು ಹಣವನ್ನಾಗಲಿ "ಮೈಸೂರು ದೀರ್ವಾರನರ" ಹೆಸರಿಗೆ ಕ್ರಮವಾಗಿ ಇಂಡಾರ್ಸ್ಮೆಂಟ್ ಮಾಡಲ್ಪಟ್ಟ ಸರ್ಕಾರಿ ಪತ್ರಗಳನ್ನಾಗಲಿ ಅಥವಾ 200 ಮಣಗಳಿಗಿಂತ ಕಡಿಮೆಯಾದ ಪರಿಮಾಣಗಳಿಗೆ ಅವುಗಳಿಗನುಗುಣವಾದ ಪೊಬಲಗುಗಳನ್ನು, ಬೆಂಗಳೂ

ರು ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಠೇವಣಿ ಇಟ್ಟು ಇದರಲ್ಲಿ ಮುಂದೆ ವಿವರಿಸಿರುವ ಷರತ್ತುಗಳನ್ನು ಅನುಸರಿಸಿ ನಡೆಯಲು ತಾವು ಬದ್ಧರೆಂದು ಸರಿಯಾದ ಛಾಪಾ ಕಾಗದದ ಮೇಲೆ ಕರಾರು ಬರೆದು ಕೊಡತಕ್ಕದ್ದು; ಸದರೀ ಕರಾರನ್ನು ಬರೆದುಕೊಟ್ಟು ರುಜು ಹಾಕಲು ಅವರು ತಪ್ಪಿದರೆ ಅಥವಾ ಅವಶ್ಯವಾದ ಠೇವಣಿ ಕೂಡಲು ನಿರಾಕರಿಸಿದರೆ ಆ ಮೊದಲೆ ಠೇವಣಿ ಕೊಟ್ಟಿರುವ ಹಣವು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವುದಲ್ಲದೆ, ಸದರೀ ಕಂಟ್ರಾಕ್ಟನ್ನು ಅನ್ಯಥಾ ವಿಲೆ ಮಾಡಲ್ಪಡುವುದು.

7. ಯಾವ ಬಗ್ಗೆ ಈಗ ದರಖಾಸ್ತು ಕೋರಿದೆಯೋ ಆ ಕಂಟ್ರಾಕ್ಟು ಈ ಕೆಳಗಿನ ಷರತ್ತುಗಳಿಗೆ ಬಳಪಟ್ಟರತಕ್ಕದ್ದು:—

(1) ಗಾಂಜಾ ಗಿಡದ ಸಾಗುವಳಿಯನ್ನು ಮತ್ತು ತಯಾರಿಯನ್ನು ಮೇಲ್ವಿಚಾರಣೆ ಮಾಡುವುದಕ್ಕೆ, ಅಥವಾ ಅದಕ್ಕೆ ಸಂಬಂಧಪಟ್ಟ ಮತ್ಯಾವುದಾದರೂ ಕೆಲಸಕ್ಕೆ, ಫಸಲು ಬೆಳೆಯುವ ಜಮೀನುಗಳಿಗಾಗಲಿ, ತಯಾರ್ಮಾಡುವ ಆವರಣಗಳಿಗಾಗಲಿ ಪ್ರವೇಶಿಸುವುದಕ್ಕೆ ಯಾವ ಎಕ್ಸೈಜ್ ಅಥವಾ ಪೋಲೀಸು ಆಫಿಸರು ಅಥವಾ ರೆವಿನ್ಯೂ ಆಫಿಸರನ್ನಾದರೂ ಕಂಟ್ರಾಕ್ಟರು ತಡೆಮಾಡಲಾಗದು.

(2) ಕಂಟ್ರಾಕ್ಟರು, ನಿಂತಿರುವ ಪೈರನ್ನಾಗಲಿ ಅದರಿಂದ ತಯಾರಾದ ಸರಕನ್ನಾಗಲಿ ಸರ್ಕಾರಕ್ಕಲ್ಲದೆ ಇತರ ಯಾವ ಮನುಷ್ಯನಿಗೂ ಬಿಕ್ರಿ ಮಾಡಲು ಅಥವಾ ವರ್ಗಮಾಡಲೂ ಕೂಡದು.

(3) ಕಂಟ್ರಾಕ್ಟರು, ತನ್ನ ಪೈರಿನ ಕೊಯ್ಯಲನ್ನು ಆರಂಭಿಸುವುದಕ್ಕೆ ಹದಿನಾಲ್ಕು ದಿನಗಳಿಗೆ ಕಡಮೆ ಇಲ್ಲದಷ್ಟು ಕಾಲ ಮುಂಚಿತವಾಗಿ, ಕಟಾವು ಮಾಡಲು ಅಪ್ಪಣೆಯ ಬಗ್ಗೆ, ಆಯಾ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರಿಗೆ ಅರ್ಜಿ ಮಾಡಿಕೊಳ್ಳಬೇಕು; ಮತ್ತು ಪೈರನ್ನು ಕೊಯ್ಯುವಾಗಲೂ, ಅದರಿಂದ ಗಾಂಜಾ ತಯಾರ್ಮಾಡುವಾಗಲೂ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರ ಮತ್ತು ಅವರಿಂದ ಆ ಬಗ್ಗೆ ನೇಮಿಸಲ್ಪಡುವ ಅವರ ತಾಬೇದಾರಿ ಅಧಿಕಾರಿಗಳ ಸಾಮಾನ್ಯ ಮೇಲ್ವಿಚಾರಣೆಗೆ ಒಳಪಟ್ಟು ಅವರು ಕೊಡುವ ಅಪ್ಪಣೆಗಳಿಗೆ ಅನುಸಾರವಾಗಿ ನಡೆಯುಬೇಕು.

(4) ಪೈರಿನ ಮೇಲ್ವಿಚಾರಣೆ ಮಾಡಲು ನೇಮಿಸಲ್ಪಟ್ಟಿರುವ ಮುಖ್ಯಸ್ಥರಾದ ಎಕ್ಸೈಜ್ ಆಫಿಸರಿಂದ ಬರಹ ಮೂಲಕವಾಗಿ ಅಂಗೀಕರಿಸಲ್ಪಡತಕ್ಕ ಸ್ಥಳಿಗಳಿಗೆ ಮಾತ್ರ ಕಂಟ್ರಾಕ್ಟರು ಪೈರನ್ನು ಸಾಗಿಸಬೇಕು; ಮತ್ತು ಆ ಸ್ಥಳಗಳಲ್ಲಿ ಮಾತ್ರ ಆ ಪೈರಿನಿಂದ ಗಾಂಜಾ ತಯಾರ್ಮಾಡಬೇಕು. ಪೈರನ್ನು ಸಾಗಿಸುವುದಕ್ಕೆ ಕಂಟ್ರಾಕ್ಟರ ಅರ್ಜಿಯ ಮೇರೆ ಅಂಥಾ ಆಫಿಸರು ಕೊಡುವ ಬಂದು ರಹದಾರಿಯನ್ನು ಪಡೆಯಬೇಕು. ಸಾಗುವಳಿ ಅಥವಾ ಕೊಯ್ಯಲು ನಡೆಯುವಾಗ ಕೀಳಲ್ಪಟ್ಟು ಗಾಂಜಾ ತಯಾರಿಗೆ ಉಪಯೋಗಿಸಲ್ಪಡದೆ ಇರುವ ಎಲ್ಲಾ ಗಿಡಗಳೂ, ಅಂಥಾ ತಯಾರಿಗೆ ತಕ್ಕ ವಲ್ಲವೆಂದು ಯೋಗ್ಯರಾದ ಆಫಿಸರುಗಳಿಂದ ತೀರ್ಮಾನಿಸಲ್ಪಡುವ ಗಿಡಗಳೂ ಸದರೀ ಆಫಿಸರರ ರೂಬರೂಬು ನಾಶಪಡಿಸಲ್ಪಡಬೇಕು.

(5) ಕೊಯ್ದಾದ ಕೂಡಲೇ ಪೈರನ್ನು ಆ ಬಗ್ಗೆ ನೇಮಿಸಲ್ಪಟ್ಟಿರುವ ಎಕ್ಸೈಜ್ ಆಫಿಸರ ಮೇಲ್ವಿಚಾರಣೆಯಲ್ಲಿ ಕೂಡಿದಷ್ಟು ಶೀಘ್ರವಾಗಿ ಹದ ಮಾಡಿ ಸದರೀ ಗಾಂಜಾವನ್ನು ಬೆಂಗಳೂರು ಸರ್ಕಾರಿ ಸೆಂಟ್ರಲ್ ಡಿಸ್ಟಿಲರಿ ಕಟ್ಟಡಗಳಲ್ಲಿರುವ ಪ್ರೊವಿಷನಲ್ ಕೋಠಿಗೆ ಅಥವಾ ಎಕ್ಸೈಜ್ ಕಮಿಷನರು ಅಪ್ಪಣೆ ಮಾಡಬಹುದಾದ ಇತರ ಸ್ಥಳಕ್ಕೆ, ಮೇಲ್ಕಂಡ ಮುಖ್ಯಸ್ಥರಾದ ಎಕ್ಸೈಜ್ ಆಫಿಸರಿಂದ ಕೊಡಲ್ಪಡುವ ರಹದಾರಿ ಪ್ರಕಾರ ಸಾಗಿಸಬೇಕು.

(6) ಮೇಲ್ಕಂಡ (5)ನೆ ಷರತ್ತಿನಲ್ಲಿ ಹೇಳಿರುವ ಸ್ಥಳಕ್ಕೆ ಗಾಂಜಾ ತಲಪಿದಾಗ, ಪುಡಿ, ಬೀಜ ಮತ್ತು ಕಡ್ಡಿ ಇವುಗಳನ್ನು ಕಳೆದು ರಫ್ತಿಗೆ ತಕ್ಕ ಸ್ಥಿತಿಯಲ್ಲಿರುವ ಹಾಗೆ ಜಾಗರೂಕತೆಯಿಂದ ಅದನ್ನು ಜಾಲಿಸಿ, ಅಯ್ದು ತರುವಾಯ ಸಂಬಂಧಪಟ್ಟ ಎಕ್ಸೈಜ್ ಆಫಿಸರಿಂದ ಅದು ಕ್ರಮವಾಗಿ ತೂಗಲ್ಪಟ್ಟು ಕ್ರಮಪ್ರಕಾರ ಅದರ ಬೆಲೆಯ ಪಾವತಿ ಬಗ್ಗೆ ಎಕ್ಸೈಜ್ ಕಮಿಷನರಿಗೆ ರಿಪೋರ್ಟು ಮಾಡಲ್ಪಡತಕ್ಕದ್ದು.

(7) ಕಂಟ್ರಾಕ್ಟರು, ಅಪ್ಪಣೆಯಿಲ್ಲದೆ ಗಾಂಜಾ ಗಿಡದ ಪೈರಿನ ಪೈಕಿ ಎಷ್ಟನ್ನಾಗಲಿ ಕೊಯ್ದರೆ, ಅಥವಾ ಬಯ್ಯುವ ರಹದಾರಿಯಲ್ಲಿ ಕಂಡ ಕಾಲದೊಳಗಾಗಿ ಪೈರನ್ನು ಜಮೀನಿನಿಂದ ತಯಾರ್ಮಾಡುವ ಸ್ಥಳಿಕ್ಕೆ ಸಾಗಿಸಲು ಅಥವಾ ಅದರಿಂದ ತಯಾರ್ಮಾಡಿದ ಗಾಂಜಾ ಎಲ್ಲವನ್ನೂ ಬೆಂಗಳೂರು ಸರ್ಕಾರಿ ಸೆಂಟ್ರಲ್ ಡಿಸ್ಟಿಲರಿಯಲ್ಲಾಗಲಿ, ಎಕ್ಸೈಜ್ ಕಮಿಷನರು ಅಪ್ಪಣೆ ಮಾಡಬಹುದಾದ ಇತರ ಸ್ಥಳದಲ್ಲಾಗಲಿ ಕೊಡಲು ತಪ್ಪಿದರೆ, ಅಥವಾ ಅವರ ಲೈಸೆನ್ಸಿನಲ್ಲಿ ಕಂಡ ಸ್ಥಳಿ ಹೊರತು ಬೇರೆ ಕಡೆ ಅದರಿಂದ ಯಾವುದಾದರೂ ನಿಷಾ ಪದಾರ್ಥಗಳನ್ನು ತಯಾರ್ಮಾಡಿದರೆ, ಅಥವಾ ಸದರಿ ರೆವಿನ್ಯೂ ಯಾ ಹುಟ್ಟುವಳಿಯನ್ನು ಭದ್ರಪಡಿಸುವ ಬಗ್ಗೆ ಎಕ್ಸೈಜ್ ಆಫಿಸರುಗಳಿಂದ ಕೊಡಲ್ಪಟ್ಟ ಅಪ್ಪಣೆಗಳನ್ನು ಅನಡ್ಲೆ ಮಾಡಿದರೆ, ಕಂಟ್ರಾಕ್ಟರು ಮನಃಪೂರ್ವಕವಾಗಿ ಅಂಥಾ ಪ್ರತಿ ಕಾರ್ಯವನ್ನು ಮಾಡಿದ ಬಗ್ಗೆ ಅಥವಾ ಮಾಡಲು ತಪ್ಪಿದ ಬಗ್ಗೆ, ಎಕ್ಸೈಜ್ ಕಮಿಷನರಿಗೆ ಯುಕ್ತ ಕಂಡ ಮೇರೆ, ಐವತ್ತು ರೂಪಾಯಿಗಳಿಗೆ ಮಿಗಾದ ಬಂದು ಮೊಬಲಗನ್ನು ಅವನ ಠೇವಣಿ ಹಣದಿಂದ ಸರ್ಕಾರಕ್ಕೆ ದಂಡವಾಗಿ ಕಳೆದುಕೊಳ್ಳಲು ಗೆರಿಯಾಗತಕ್ಕದ್ದು. ಈ ಷರತ್ತು ಮೇರೆ ಅಂಥಾ ದಂಡ ಕಳೆದುಕೊಂಡುದರಿಂದ, ಕಂಟ್ರಾಕ್ಟರು ಅಂಥಾ ಕೃತ್ಯ ಅಥವಾ ಲೋಪದಿಂದ ಆಗಿಂದಾಗ್ಯೆ ತಿದ್ದುಪಾಟು ಮಾಡಲ್ಪಟ್ಟ 1901ನೆ ಇಸವಿಯ 5ನೆ ನಂಬರ್ ಎಕ್ಸೈಸ್ ರೆಗ್ಯುಲೇಷನಿನ ಅಥವಾ ಅದಕ್ಕೆ ಸಂಬಂಧಪಟ್ಟು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನುಗಳಿಗೆ ವಿರೋಧವಾಗಿ ನಡೆಸಿರಬಹುದಾದ ಯಾವುದಾದರೂ ತಪ್ಪಿತದ ಬಗ್ಗೆ, ಆತನ ಪ್ರಾಸಿಕ್ಯೂಷನಿಗೆ ಅಡ್ಡಿಯಾದುದಾಗಿ ಎಣಿಸಲ್ಪಡಕೂಡದು.

(8) ಮೇಲ್ಕಂಡ ಮೇರೆ ಗಾಂಜಾ ಸರಬರಾಯಿಯು ಪ್ರತಿ ವರ್ಷದ ಏಪ್ರೆಲ್ 15ರ ವೇಳಿಗೆ ಮುಗಿಸಲ್ಪಡಬೇಕು. ಮತ್ತು ಆ ತಾರೀಖಿನ ವೇಳಿಗೆ ಕಂಟ್ರಾಕ್ಟರು ಸರ್ಕಾರಕ್ಕೆ ತಾನು ಬೆಳೆದು ಕೊಡುವುದಾಗಿ ಒಪ್ಪಿಕೊಂಡಷ್ಟು ಗಾಂಜಾವನ್ನು ಸರಬರಾಯಿ ಮಾಡಲು ತಪ್ಪಿದರೆ, ಆತನು ಸರ್ಕಾರಕ್ಕೆ, ಬ್ರಿಟಿಷ್ ರಾಜ್ಯದಿಂದಾಗಲಿ ಇತರ ಕಡೆಯಿಂದಾಗಲಿ ಗಾಂಜಾ ಆಮದು ಬಗ್ಗೆ ಕೊಡಬೇಕಾಗಿರಬಹುದಾದ ಹಾಸಲನ್ನು ಮುಂಚಿತವಾಗಿಯೇ ಕೊಟ್ಟು ಗಾಂಜಾ ಆಮದು ಮಾಡಿಕೊಳ್ಳಲು ಮುಟ್ಟುವ ಖರ್ಚನ್ನು ಆತನು ಗಾಂಜಾ ಸರಬರಾಯಿ ಮಾಡಲು ತಪ್ಪಿದ ಪ್ರಯುಕ್ತ, ಮೈಸೂರು ಸರ್ಕಾರಕ್ಕೆ ಉಂಟಾಗಬಹುದಾದ ಯಾವುದಾದರೂ ಇತರ ನಷ್ಟವನ್ನೂ ಕೂಡ ಕಟ್ಟಿಕೊಡಲು ಬದ್ಧನಾಗಿರತಕ್ಕದ್ದು. ಅಂಥಾ ಖರ್ಚನ್ನೂ, ನಷ್ಟವನ್ನೂ ತಪ್ಪಿತಸ್ಥನಿಂದ ಅವನ ಠೇವಣಿ ಹಣವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವುದರ ಮತ್ತು ಜರ್ಮಿ ಕಂದಾಯದ ವಸೂಲಿಗೆ ಸಂಬಂಧಪಟ್ಟ ನಿಬಂಧನೆಗಳ ಮೇರೆ ಅವನ ಇತರ ಸ್ವತ್ತನ್ನು ಜಪ್ತು ಮಾಡಿ ವಿಕ್ರಯಿಸುವುದರ ಮೂಲಕ ವಸೂಲ್ಮಾಡಲಾಗುವುದು.